ಅಧ್ಯಕ್ಷರು.—ಇವೊತ್ತು ಸಾಯಂಕಾಲದೊಳಗೆ ಅಥವಾ ನಾಳೆ ಉತ್ತರ ಒದಗಿಸುತ್ತೇವೆಂದು ಮಾನ್ಯ ಮಂತ್ರಿಗಳೇ ತಿಳಿಸಿ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಹಿಂದೆ ಕೂಡ ಇದೇ ರೀತಿ ಉತ್ತರ ಹೇಳುತ್ತೇವೆಂದು ಹೇಳಿದ್ದರು ಈ ಬಗ್ಗೆ ಇನ್ನೂ ನಮಗೆ ಉತ್ತರ ಬಂದಿಲ್ಲ.

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೆ, ಮಾನ್ಯ ಅರಣ್ಯ ಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆ. ಅವರು ಬಂದತಕ್ಷಣ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಚಿವರು ಇಲ್ಲಿ ಇಲ್ಲ ಎನ್ನುವ ಪ್ರಶ್ನೆ ಅಲ್ಲ. ನಿಮ್ಮ ಉತ್ತರ ಯಾವಾಗಲೂ ಒಂದೇ ತರಹ ಇರುತ್ತದೆ. ತಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಬೇಕು

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಧ್ಯಕ್ಷರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳೋಣ

೨-೩೦ ಪಿ. ಎಂ.

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕು, ಬಿ. ಜಿ. ಪುರ ಹೋಬಳಿ, ಕಲ್ಯಾಣಿ ಕೊಪ್ಪಲು ಗ್ರಾಮದ ನಿವಾಸಿ ಮಾದಯ್ಯನನ್ನು ಕೊಲೆ ಮಾಡಿರುವ ಬಗ್ಗೆ

ಶ್ರೀ ಆರ್. ಎನ್. ನಾಯ್ಕ (ಭಟ್ಕಳ).—ಮಾನ್ಯ ಅಧ್ಯಕ್ಷರೇ, ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕು, ಬಿ. ಜಿ. ಪುರ ಹೋಬಳಿ ಕಲ್ಯಾಣಿ ಕೊಪ್ಪಲು ಗ್ರಾಮದ ನಿವಾಸಿ ಗಾರೆ ಕೆಲಸ ಮಾಡುವ ಬಿ.ಡಿ.ಮಾದಯ್ಯ ಎಂಬುವನನ್ನು ಲಿಂಗರಾಜು ಎಂಬುವನು ಗಾರೆ ಕೆಲಸಕ್ಕೆ ಅಂತ ಕರೆದುಕೊಂಡು ಹೋಗಿದ್ದು ಸುಮಾರು ಐದು ದಿನಗಳ ನಂತರ ಸದರಿ ಮಾದಯ್ಯನನ್ನು ಮರಕ್ಕೆ ನೇತು ಹಾಕಿರುವುದಾಗಿ ಆಕ್ಕಪಕ್ಕದ ಜನರು ಮಾದಯ್ಯನ ಪತ್ನಿ ಮಹದೇವಮ್ಮನಿಗೆ ತಿಳಿಸಿದ ನಂತರ, ಮಹದೇವಮ್ಮ ಸ್ಥಳಕ್ಕೆ ಹೋಗಿ ಮರಕ್ಕೆ ನೇತು ಬಿದ್ದಿದ್ದುದು ಮಾದಯ್ಯನೇ ಎಂಬುದನ್ನು ಖಾತರಿ ಪಡಿಸಿಕೊಂಡ ನಂತರ ಪೋಲೀಸರಿಗೆ ಹಾಗೂ ವೈದ್ಯರಿಗೆ ದೂರು ಕೊಟ್ಟು ಅವರು ಮಹಜರು ನಡೆಸಿ ಶವಪರೀಕ್ಷೆ ನಡೆಸಿದರು. ಈ ಬಗ್ಗೆ ಲಿಂಗರಾಜುವಿನ ಮೇಲೆ ಅನುಮಾನವಿದೆ. ಎಂದು ಪೋಲೀಸರು ಠಾಣೆಯ ಉಪನಿರೀಕ್ಷಕರಿಗೆ ತಿಳಿಸಿದ್ದಾಗ್ಯೂ ಯಾವ ಕ್ರಮವನ್ನೂ ತೆಗೆದುಕೊಂಡಿರುವುದಿಲ್ಲ ಈ ವಿಷಯವನ್ನು ಮಹದೇವಮ್ಮ ಮಾನ್ಯ ಮುಖ್ಯಮಂತ್ರಿಯವರಿಗೆ ದೂರು ನೀಡಿ ಲಿಂಗರಾಜು, ವೈದ್ಯರು ಹಾಗೂ ಪೋಲೀಸರು ಠಾಣೆಯ ಉಪನಿರೀಕ್ಷಕರ ಮೇಲೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ. ಆದ್ದರಿಂದ ಈ ಬಗ್ಗೆ ಸರಕಾರ ಕೂಡಲೇ ಕ್ರಮ ಕೈಕೊಂಡು ವಿಚಾರಣೆ ನಡೆಸಿ ತಪ್ಪಿತಸ್ಥರನ್ನು ಶಿಕ್ಷಿಸಿ ಮಹದೇವಮ್ಮನಿಗೆ ಸೂಕ್ತ ಸಹಾಯ ನೀಡಬೇಕೆಂದು ಸರಕಾರವನ್ನು ಒತ್ತಾಯಿಸಲು ಈ ಸೂಚನೆ ನೀಡಲಾಗಿದೆ

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹಸಚಿವರು).—ಈಗಾಗಲೇ ಸಿ.ಓ.ಡಿ.ಗೆ ಇದರ ಬಗ್ಗೆ ತನಿಖೆ ಮಾಡುವುದಕ್ಕೆ ಆರ್ಡರ್ ಮಾಡಿದ್ದೇವೆ.

ಬೆಂಗಳೂರು ನಗರದಲ್ಲಿ ಸಿನಿಮಾ ಮಂದಿರಗಳನ್ನು ಮುಚ್ಚಿರುವುದರಿಂದ ಅಲ್ಲಿ ಕೆಲಸ ಮಾಡುತ್ತಿದ್ದ ನೌಕರರಿಗೆ ತೊಂದರೆಯುಂಟಾಗಿರುವ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ಕಳೆದ ೧೦ ದಿವಸದಿಂದ ಬೆಂಗಳೂರಿನಲ್ಲಿ ಸಿನಿಮಾ ಮಂದಿರಗಳಲ್ಲಿ ಕೆಲಸ ಮಾಡುವ ನೌಕರರು ಹೈಕೋರ್ಟ್ ತೀರ್ಪಿನಂತೆ ಅವರಿಗೆ ಕೊಡಬೇಕಾದ ಸಂಬಳ ಕೊಡಬೇಕೆಂದು ಚಳುವಳಿ ನಡೆಸುತ್ತಿದ್ದು ಎಲ್ಲ ಚಿತ್ರ ಮಂದಿರಗಳು ಬಂದ್ ಆಗಿವೆ.

ಇದರ ಕಾರಣ ನಿನ್ನೆ ನಗರದ ಕಪಾಲಿ ಚಿತ್ರ ಮಂದಿರದ ಮುಂದೆ ಮುಂಗಡ ಟಿಕೆಟ್ ಕೊಡಲಿಲ್ಲ ವೆಂಬ ಕಾರಣ ಚಿತ್ರ ಪ್ರೇಮಿಗಳು ಸಿಟ್ಟಿಗೆದ್ದು ರಸ್ತೆಗಳಲ್ಲಿ ಓಡಾಡುತ್ತಿದ್ದ ವಾಹನಗಳಿಗೆ ಕಲ್ಲು ತೂರಿ ಅಲ್ಲಲ್ಲಿ ಗಲಭೆ ಆದ ಸಂಗತಿಗಳು ಪತ್ರಿಕೆಯಲ್ಲಿ ಪ್ರಕಟವಾಗಿದೆ.

ವಿನಾ ಕಾರಣ ಸಿನಿಮಾ ಮಾಲೀಕರು ಉದ್ದಿಶ್ಯ ಪೂರ್ವಕವಾಗಿ ಈ ಚಳುವಳಿಯನ್ನು ಹತ್ತಿಕ್ಕಲು ಸಂಚು ನಡೆಸಿ ಯಾವುದೇ ತೀರ್ಮಾನಕ್ಕೆ ಸರಕಾರದ ಜೊತೆ ಬರಲು ನಿಧಾನಮಾಡಿರುವುದರಿಂದ ನಗರದಲ್ಲಿ ಗಲಭೆಗಳು ಪ್ರಾರಂಭವಾಗಿ ಸಾರ್ವಜನಿಕರಿಗೆ ತೊಂದರೆ ಆಗುವ ಸಂದರ್ಭವಿದೆ.

ಸರಕಾರ ಈ ಬಗ್ಗೆ ಸಿನಿಮಾ ಮಾಲೀಕರಿಗೆ ಎಚ್ಚರಿಕೆ ಕೊಟ್ಟು ಕಾರ್ಮಿಕರ ನ್ಯಾಯವಾದ ಬೇಡಿಕೆಯನ್ನು ಈಡೇರಿಸಿ ನಗರದಲ್ಲಿ ಚಿತ್ರ ಪ್ರೇಮಿಗಳಿಂದ ಆಗಬಹುದಾದ ಅಹಿತಕರ ಘಟನೆ ತಡೆಯುವಲ್ಲಿ ಈವರೆಗೆ ಏನು ಕ್ರಮ ಕೈಕೊಂಡಿದೆ ಎಂಬ ಬಗ್ಗೆ ಸರಕಾರದ ಹೇಳಿಕೆಯನ್ನು ತಿಳಿಯಬಯಸುತ್ತೇನೆ.

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಸಚಿವರು).—ಕರ್ನಾಟಕ ಸರ್ಕಾರವು ೧೯೮೩ನೇ ಇಸವಿಯಲ್ಲಿ ಚಲನಚಿತ್ರ ಉದ್ಯಮಕ್ಕೆ ಸಂಬಂಧಿಸಿದ ಕಾರ್ಮಿಕರ ಕನಿಷ್ಠ ವೇತನವನ್ನು ಪುನರ್ ವಿಮರ್ಶಿಸಲು ಕರಡು ಪ್ರಕಟಣೆಯನ್ನು ಹೊರಡಿಸಿತು. ಅಂತಿಮ ಸರ್ಕಾರಿ ಪ್ರಕಟಣೆಯು ೧೯೮೨ರ ಫೆಬ್ರುವರಿಯಲ್ಲಿ ಜಾರಿಗೆ ತರಲಾಯಿತು. ೧೯೮೨ರ ಅಂತಿಮ ಪ್ರಕಟಣೆಯಂತೆ ಕಾರ್ಮಿಕರು ಮೂಲವೇತನದ ಜೊತೆಗೆ ಪ್ರತಿ ದಿನಕ್ಕೆ ೨ ಪೈಸೆ ತುಟ್ಟಿಭತ್ಯವನ್ನು ಪ್ರತಿಯೊಂದು ಸೂಚ್ಯಾಂಕದ ಏರಿಕೆಗನುಗುಣವಾಗಿ ಪಡೆಯುವವರು, ಆದರೆ ಈ ಅಂತಿಮ ಪ್ರಕಟಣೆಯನ್ನು ಮಾಲೀಕರ ವರ್ಗ ರಾಜ್ಯದ ಉಚ್ಚ ನ್ಯಾಯಾಲಯದ ಮುಂದೆ ಪ್ರಶ್ನಿಸಿದರು. ಉಚ್ಚನ್ಯಾಯಾಲಯವು ಅಕ್ಟೋಬರ್ ೧೯೮೨ರಲ್ಲಿ ೧೯೮೨ರ ಅಂತಿಮ ಪ್ರಕಟಣೆಗಳನ್ನು ತಾಂತ್ರಿಕ ಕಾರಣಗಳ ಮೇಲೆ ರದ್ದುಪಡಿಸಿತು ಮತ್ತು ಮಾಲೀಕರಿಗೆ ೧೯೮೨ರ ಅಂತಿಮ ಪ್ರಕಟಿತ ವೇತನದ ಹಾಗೂ ಹಿಂದೆ ಇದ್ದ ವೇತನದ ಅಂತರದ ಶೇ. ೫೦ ರಷ್ಟನ್ನು ಕಾರ್ಮಿಕರಿಗೆ ನೀಡುವಂತೆ ಆದೇಶವಿತ್ತಿತು.

ಈ ವಂಧ್ಯೆ ೧೯೮೨ರ ಏಪ್ರಿಲ್ ಮಾಹೆಯಲ್ಲಿ ಚಿತ್ರಮಂದಿರಗಳ ಮಾಲೀಕರು ಹಾಗೂ ಕಾರ್ಮಿಕರ ನಡುವೆ ಒಂದು ಒಪ್ಪಂದ ಏರ್ಪಟ್ಟಿತು. ಇದರಂತೆ ಮಾಲೀಕರು ಶೇ ೫೦ ರಷ್ಟು ಹೆಚ್ಚಳದ ವೇತನವನ್ನು ಹಾಗೂ ಶೇ. ೫೦ ರಷ್ಟು ವೇತನವನ್ನು ಮುಂಗಡವಾಗಿ ನೀಡಲು ಒಪ್ಪಿತು. ನಂತರ ೧೯೮೨ರ ಏಪ್ರಿಲ್ ತಿಂಗಳಲ್ಲಿ ತುಟ್ಟಿಭತ್ಯದ ಶೇ. ೫೦ ರಷ್ಟು ಅಂದರೆ ರೂ ೯-೫೦ ಅನ್ನು ತುಟ್ಟಿಭತ್ಯೆಯಾಗಿಯೂ ಹಾಗೂ ಇನ್ನುಳಿದ ಶೇ. ೫೦ ರಷ್ಟನ್ನು ಮುಂಗಡ ತುಟ್ಟಿಭತ್ಯಯಾಗಿಯೂ ನೀಡಲು ಒಪ್ಪಿತ್ತು ಮುಂದೆ ೧೯೮೪ರ ಏಪ್ರಿಲ್ ತಿಂಗಳಿಂದ ರೂ. ೨೧ ತುಟ್ಟಿಭತ್ಯೆ ಹಾಗೂ ರೂ. ೨೧ ಮುಂಗಡ ತುಟ್ಟಿಭತ್ಯೆಯಾಗಿ ನೀಡಲು ಒಪ್ಪಿತು. ಈ ರೂ. ೨೧ರ ವಿಭಜನೆ ಈ ರೀತಿ ಇದೆ. —

	ರೂ. ಪೈ.
೧೯೮೩	೯-೫೦
೧೯೮೪	೧೧-೫೦
	೨೧-೦೦

ಈ ಮುಂಗಡವನ್ನು ವೇತನದ ಅಂತಿಮ ಪ್ರಕಟಣೆಯು ರದ್ದಾದಲ್ಲಿ ಕಾರ್ಮಿಕರ ವೇತನದಿಂದ ಹಿಂದಿರುಗಿಸಿಕೊಳ್ಳುವ ಶರತ್ತಿನಂತೆ ಮೇಲೆ ಒಪ್ಪಿಕೊಳ್ಳಲಾಗಿತ್ತು.

ಉಚ್ಚನ್ಯಾಯಾಲಯದ ಆದೇಶದಂತೆ ಸರ್ಕಾರವು ೧೯೮೪ ಮೇ ಮಾಹೆಯಲ್ಲಿ ಕನಿಷ್ಠ ವೇತನದ ಅಂತಿಮ ಪ್ರಕಟಣೆಯನ್ನು ಪ್ರಕಟಿಸಿತು. ಈ ಅಂತಿಮ ಪ್ರಕಟಣೆಯಂತೆ ಕಾರ್ಮಿಕರು ಮೂಲ ವೇತನದ ಜೊತೆಗೆ ತುಟ್ಟಿಭತ್ಯೆಯನ್ನು ಪಡೆಯಲು ಅರ್ಹರಾಗುತ್ತಾರೆ.

ಈ ಲೆಕ್ಕಾಚಾರವು ಈ ಕೆಳಕಂಡಂತೆ ಇದೆ.

ಮೂಲ ವೇತನ ರೂ. ೧೦ ಅಥವಾ ಅದಕ್ಕೆ ಕಡಿಮೆ ಇದ್ದಲ್ಲಿ — ಪ್ರತಿಯೊಂದು ಅಂಶದ ಏರಿಕೆಗೆ ಪ್ರತಿದಿನಕ್ಕೆ ೫ ಪೈಸೆಯಂತೆಯೂ

ಮೂಲ ವೇತನ ರೂ. ೧೦ಕ್ಕಿಂತ ಹೆಚ್ಚು ಹಾಗೂ ರೂ. ೧೫ಕ್ಕಿಂತ ಕಡಿಮೆ ಇದ್ದಲ್ಲಿ — ಪ್ರತಿಯೊಂದು ಅಂಶದ ಏರಿಕೆಗೆ ಪ್ರತಿದಿನಕ್ಕೆ ೭ ಪೈಸೆಯಂತೆಯೂ

ಹಾಗೂ ಮೂಲ ವೇತನ ರೂ. ೧೫ ಅಥವಾ ಅದಕ್ಕಿಂತ ಹೆಚ್ಚು ಇದ್ದಲ್ಲಿ — ಪ್ರತಿಯೊಂದು ಅಂಶದ ಏರಿಕೆಗೆ ಪ್ರತಿದಿನಕ್ಕೆ ೯ ಪೈಸೆಯಂತೆಯೂ

ನಿಗದಿಯಾಯಿತು.

ಈ ತುಟ್ಪಿಭತ್ಯೆ ದರಗಳು ಅನುಕ್ರಮವಾಗಿ ರೂ. ೧೧–೨೫, ೧೪–೨೫ ಹಾಗೂ ೨೦–೨೫ಕ್ಕೆ ಸೀಮಿತಗೊಳಿಸಲಾಗಿತ್ತು.

ಈ ಪುಸ್ತುತ ಪ್ರಕಟಣೆಯನ್ನೂ ಸಹ ಕೆಲವು ಮಾಲೀಕರು ರಾಜ್ಯದ ಉಚ್ಚ ನ್ಯಾಯಾಲಯದ ಮುಂದೆ ಪ್ರಶ್ನಿಸಿದರು. ನ್ಯಾಯಾಲಯವು ಜನವರಿ ೧೯೮೫ರಲ್ಲಿ ತೀರ್ಪಿತ್ತು. ೧೯೮೪ರ ಪ್ರಕಟಣೆಯಲ್ಲಿ ನಿಗದಿಪಡಿಸಲಾದ ತುಟ್ಪಿಭತ್ಯೆಯನ್ನು ಪುನರ್ ಪರಿಶೀಲಿಸುವಂತೆ ರಾಜ್ಯ ಸರ್ಕಾರಕ್ಕೆ ಆದೇಶವಿತ್ತಿತು. ಸದರಿ ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಈ ವಿಧ್ಯೆ ದಿನಾಂಕ ೨೬–೭–೧೯೮೫ರಲ್ಲಿ ಸಿನಿಮಾ ವರ್ಕರ್ಸ್ ಯೂನಿಯನ್‌ನವರು ಫಿಲಂ ಛೇಂಬರ್ ಆಫ್ ಕಾಮರ್ಸ್‌ಗೆ ಉದ್ದೇಶಿಸಿ ಒಂದು ಪತ್ರ ಬರೆದರು, ಅದರಂತೆ ೧–೪–೧೯೮೫ರಿಂದ ಕಾರ್ಮಿಕರಿಗೆ ಅವರ ಹುದ್ದೆಗಳನ್ನು ಅನುಸರಿಸಿ ರೂ. ೫೪ರಿಂದ ರೂ. ೪೨ರ ವರೆಗೆ ಈ ತುಟ್ಪಿಭತ್ಯೆಯನ್ನು ಈಗಿರುವ ತುಟ್ಪಿಭತ್ಯೆಯ ಜೊತೆಗೆ ನೀಡಲು ಕೋರಿದರು.

ಸಿನಿಮಾ ನೌಕರರ ಸಂಘವು ಮುಂದಿಟ್ಟ ಬೇಡಿಕೆಯನ್ನು ಮಾಲೀಕರು ಒಪ್ಪಿಕೊಳ್ಳದ ಕಾರಣ ದಿನಾಂಕ ೧೨–೮–೮೫ರಿಂದ ಚಲನಚಿತ್ರ ಮಂದಿರಗಳಲ್ಲಿ ಕೆಲಸ ಮಾಡುವ ನೌಕರರು ಮುಷ್ಕರ ಹೂಡಿದರು.

ದಿನಾಂಕ ೧೭–೮–೮೫ರ ಮಧ್ಯಾಹ್ನ ೧ ಘಂಟೆಯಲ್ಲಿ ಕಾರ್ಮಿಕ ಆಯುಕ್ತರು ಜಂಟಿ ಸಭೆಯನ್ನು ಕರೆದರು. ಆದರೆ ಸದರಿ ಜಂಟಿ ಸಭೆಗೆ ನೌಕರರ ಪ್ರತಿನಿಧಿಗಳು ಹಾಜರಾದರೂ ಮಾಲೀಕ ವರ್ಗ ಹಾಜರಾಗಲಿಲ್ಲ. ಮುಂದುವರಿದ ಜಂಟಿ ಸಭೆಯು ದಿನಾಂಕ ೧೯–೮–೮೫ ಮತ್ತು ೨೮–೮–೮೫ ರಂದು ಮುಂದುವರೆಯಿತು. ಕಾರ್ಮಿಕ ಆಯುಕ್ತರು ಸದರಿ ಜಂಟಿ ಸಭೆಯಲ್ಲಿ ಅನೇಕ ಸೂಕ್ತ ಸಲಹೆಗಳನ್ನು ಉಭಯ ಪಕ್ಷಗಳಿಗೆ ನೀಡಿದರು. ಆದರೂ ಉಭಯ ಪಕ್ಷಗಳು ತಮ್ಮ ತಮ್ಮ ವಾದಗಳಿಗೆ ಅಂಟಿಕೊಂಡಿದ್ದರಿಂದ ವಿವಾದವನ್ನು ಬಗೆಹರಿಸುವುದರಲ್ಲಿ ವಿಳಂಬವಾಗಿದೆ. ಆದರೂ ಕಾರ್ಮಿಕ ಆಯುಕ್ತರು ತಮ್ಮ ಪ್ರಯತ್ನವನ್ನು ಮುಂದುವರೆಸುತ್ತಿದ್ದಾರೆ. ನೌಕರರ ಮುಷ್ಕರವು ಮುಂದುವರೆಯುತ್ತಿದೆ.

ಮಾನ್ಯ ಅಧ್ಯಕ್ಷರೇ ಮತ್ತೆ ನಾನು ನಮ್ಮ ಅಧಿಕಾರಿಗಳನ್ನು ಕರೆಸಿ ಹೇಳಿದ್ದೇನೆ. ೪–೩೦ ಗಂಟೆಗೆ ಈಗ ಮಾಲೀಕರನ್ನು ಮತ್ತು ಕಾರ್ಮಿಕ ವರ್ಗದ ಮುಖಂಡರನ್ನು ಕರೆಸಿ ಮಾತನಾಡಿ ಇವತ್ತು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆಂದು ತಿಳಿಯಪಡಿಸುತ್ತೇನೆ.

(10) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಂಚಿನ ಕಾರ್ಮಿಕರು ಮುಷ್ಕರ ಮಾಡುತ್ತಿರುವ ಬಗ್ಗೆ.

ಶ್ರೀ ಆರ್. ವೆಂಟರಾಮಯ್ಯ (ಮುಳಬಾಗಲು).—ಮಾನ್ಯ ಅಧ್ಯಕ್ಷರೇ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೭೦೦೦ ಕ್ಕೂ ಹೆಚ್ಚಿನ ಹೆಂಚಿನ ಕಾರ್ಮಿಕರು ಮುಷ್ಕರ ಹೂಡಿ ಬೆಲೆ ಏರಿಕೆಗೆ ಸರಿದೂಗುವ ತುಟ್ಪಿಭತ್ಯೆ ಇತ್ಯಾದಿ ಬೇಡಿಕೆಗಳಿಗಾಗಿ ಒತ್ತಾಯಿಸಿದಾಗ ಕಾರ್ಮಿಕ ಮಂತ್ರಿಗಳು ಹೆಂಚಿನ ಕೈಗಾರಿಕೆಯ ಪರಿಸ್ಥಿತಿ ಅಧ್ಯಯನ ಮಾಡಲು ಒಂದು ತ್ರಿಪಕ್ಷೀಯ ಸಮಿತಿಯನ್ನು ರಚಿಸಿ ೩ ತಿಂಗಳೊಳಗೆ ಅದರ ವರದಿಯನ್ನು ಪಡೆಯುತ್ತೇವೆಂದು ಹೇಳಿ ಒಂದೂವರೆ ವರ್ಷವಾದರೂ ತ್ರಿಪಕ್ಷೀಯ ಸಮಿತಿ ರಚನೆಯಾಗಿಲ್ಲ.

ಈ ತ್ರಿಪಕ್ಷೀಯ ಸಮಿತಿ ಹೆಂಚಿನ ಕೈಗಾರಿಕೆ ಕಾರ್ಮಿಕರು ಮುಷ್ಕರದಲ್ಲಿದ್ದಾಗ ನಡೆದ ಕಾರ್ಮಿಕರ ಮಂತ್ರಿಗಳ ಜೊತೆ ನಡೆದ ಸಂಧಾನದಲ್ಲಿ ತೀರ್ಮಾನವಾದ ಒಪ್ಪಂದಗಳ ಒಂದು ಅಂಶ. ಈ ಒಪ್ಪಂದವನ್ನು ಜಾರಿ ಮಾಡಲು ಸರ್ಕಾರವೇ ಹಿಂದೇಟು ಹಾಕಿ ಹೆಂಚಿನ ಕೈಗಾರಿಕೆ ಮಾಲೀಕರಿಗೆ ಲಕ್ಷಾಂತರ ರೂಪಾಯಿ ಆದಾಯ ಮಾಡಿಕೊಡುವುದರಲ್ಲಿ ಆಸಕ್ತವಾಗಿದೆ.

ಬೆಲೆ ಏರಿಕೆಗೆ ಸರಿದೂಗಂದ ತುಟ್ಪಿಭತ್ಯೆ ಈಗ ಎಲ್ಲ ಕೈಗಾರಿಕೆಗಳಲ್ಲೂ ಒಪ್ಪಿಕೊಂಡಿರುವ ತತ್ವ ದೇಶದ ಅನೇಕ ಕಡೆಗಳಲ್ಲಿ ಕೃಷಿ ಕಾರ್ಮಿಕರಿಗೆ ಕೂಡ ಇದು ಅನ್ಯಾಯವಾಗಿದೆ. ಆದರೆ ಈ ಕಾರ್ಮಿಕರಿಗೆ ಮಾತ್ರ ಆ ರೀತಿಯಾಗಿ ನೀಡಲು ನಿರಾಕರಿಸುವುದರಿಂದ ಹೆಂಚಿನ ಕಾರ್ಖಾನೆಯ ಕಾರ್ಮಿಕರ ಜೀವನ ವೆಚ್ಚ, ನಿಜ ವೇತನ (ರಿಯಲ್ ವೇಜಸ್) ದಿನೇ ದಿನೇ ಕಂಸಿಯುತ್ತಿದೆ. ಕಷ್ಟಕರ ಪರಿಸ್ಥಿತಿಯಲ್ಲಿ